(67)

ವಾರದ ಸಂಚಿಕೆ

SATYAVADI Oldest Newspaper of Mysore

ಸತ್ಯವಾದಿ

Reg No. M 1299
Daily & Weekly

ಸಂಪುಟ 26 ಸಂಚಿಕೆ 361] ಶನಿವಾರ 15—5—1943 [6 ಪೈ

This Space is available for Advt.

ಮಲನ ಲೇಖನಗಳನ್ನು ಪ್ರಕಟಿಸಲಾಗುತ್ತೆ

ಈ ವಾರದ ಭವಿಷ್ಯ

ಕೃಷ್ಣಾಪುರದ ವೆಂಕಟನರಸಿಂಹಾಚಾರ್
ಶ್ರೀ ರಾಮಕೃಷ್ಣ ಜ್ಯೋತಿಷಾಲಯ

ಮೇಷ

ಅಧೈರ್ಯದಿಂದಲೂ ಸೋಮಾರಿತನದಿಂದಲೂ ಕೆಲಸಕಾರ್ಯಗಳನ್ನು ಮಾಡದಿರುವುದು ಸರಿಯಲ್ಲ ಹಣಕಾಸಿನವು ವ್ಯಯಾಧಿಕವೂ ಪೆಟ್ಟಾಗಿದರೂ ಭಗವಂತನ ದಯೆಯಿಂದ ಹೇಗೋ ಪಾರಾಗುವಿರಿ.

ವೃಷಭ

ಧನಾರ್ಜನೆಯ ವಿಷಯದಲ್ಲಿ ಆಸಕ್ತಿ ಹೆಚ್ಚಾಗಿದೆ, ನಿಮ್ಮ ಪ್ರಯತ್ನಗಳಿಗೆ ತಕ್ಕ ಮಟ್ಟಿಗೆ ಫಲವಿದೆ.

ಮಿಥುನ

ಜಾಗರೂಕತೆಯಿಂದ ವರ್ತಿಸಿ. ಜನರಲ್ಲಿ ಮನಸ್ತಾಪಕ್ಕೆ ಅವಕಾಶವಿರಿ. ಹಣದ ಕೊರತೆಯು ಸ್ವಲ್ಪ ಪೀಡಿಸುತ್ತೆ.

ಕರ್ಕಾಟಕ

ಸುಖಾಧಿಕವಿದ್ದರೂ, ಇಲ್ಲದ ಚಿಂತೆ ಆವರಿಸುವುದು. ಧನದ ಅಡಚಣೆ ಕಡಮೆಯಾಗುವುದು.

ಸಿಂಹ

ಯತ್ನಕಾರ್ಯದಲ್ಲಿ ತಕ್ಕಮಟ್ಟಿನ ಫಲವಿದೆ, ಸಾಂಪತ್ತಿಕ ಸ್ಥಿತಿಯು ಸ್ವಲ್ಪ ಹಾಗಾಗಾನೇ.

ಕನ್ಯಾ

ಪರಿಸ್ಥಿತಿ ಉತ್ತಮಗೊಳ್ಳುತ್ತಿದೆ ಸ್ವಪರ ಜನರ ಸಹಾಯವಿದೆ ನಿಮಗೆ ಬೇಕಾದಷ್ಟು ದುಡ್ಡು ಮಾತ್ರ ಒದಗುವುದು.

ತುಲಾ

ಇನ್ನು ಮುಂದೆ ಸ್ವಲ್ಪ ಅನುಕೂಲಗಳು ಒದಗುವುವು,

ವೃಶ್ಚಿಕ

ಕೈ ಹಾಕಿದ ಕೆಲಸವು ಲಾಭದಾಯಕವಾಗಿರುವುದು. ಸಂಸಾರದಲ್ಲಿ ಸುಖ ಶಾಂತಿ ನೆಲೆಸಿರುವುದು.

ಧನು

ಸ್ವಪರ ಜನರು ವಿರೋಧವಾದರೂ ಎಚ್ಚರಿಕೆಯಿಂದಿರಿ ಹಣದ ತಾಪತ್ರಯ ತಗ್ಗುವುದು.

ಮಕರ

ಚಂಚಲತೆ ಹೆಚ್ಚಾಗಿದೇ ಮಂಗಳ ಕಾರ್ಯಗಳಲ್ಲಿ ಭಾಗವಹಿಸುವಿರಿ. ಖರ್ಚು ಹೆಚ್ಚಾಗಿದೆ.

ಕುಂಭ

ಕೆಲಸಕಾರ್ಯಗಳಲ್ಲಿ ಆತಂಕ ಬರುವುವು ಮನಸ್ಸಿನ ಶಾಂತಿಗೆ ಭಂಗ, ಬರೀ ಯೋಚನೆ.

ಮೀನ

ತೊಂದರೆಗಳು ಆವರಿಸಿರುವಂತೆ ಕಾಣುವುದಾದರೂ ಭಯಪಡಬೇಕಾಗಿಲ್ಲ. ಎಲ್ಲ ದೂರವಾಗುವುವು.

ಶ್ರೀ ಓಂ ಬ್ರಾಂಡ್ ಕೇಸರಿ

ಈ "ಓಂ" ಗುರ್ತಿನ ಕೇಸರಿಯು ಅತ್ಯಂತ ಪರಿಶುದ್ಧವಾದುದು. ಇದರಲ್ಲಿ ಯಾವ ಅಕ್ಷೇಪಕರವಾದ ಪದಾರ್ಥವೂ ಸೇರಿಲ್ಲ; ಮತ್ತು ಶಾಸ್ತ್ರೀಯವಾಗಿ ಪರಿಶುದ್ಧವಾದುದು. ದೇವಸ್ಥಾನಗಳಲ್ಲಿಯೂ ದೇವರ ಪೂಜೆಗೂ, ಔಷಧಿಗಳಿಗೂ ತಿಂಡಿ ಪದಾರ್ಥಗಳಿಗೂ ಸುಖ ಸಂತೋಷಕಾಲದಲ್ಲೂ ಉಪಯೋಗಿಸಲ್ಪಡಲು ಅರ್ಹವಾಗಿದೆ.

ಅತ್ಯಂತ ಪರಿಶುದ್ಧವಾದುದೆಂದು ಗ್ಯಾರಂಟಿ ಹೊಂದಿದೆ.

ವಲ್ಲಭದಾಸ್ ತೇಜಪಾಲ್
೧೪ ಗೋವಿಂದಪ್ಪನಾಯಕ್ ಸ್ಟ್ರೀಟ್, ಜಿ. ಟಿ. ಮದರಾಸು

ಹಕ್ಕು ಯಾರಿಗೆ

ಮನೆಯ ಖರ್ಚಿಗೆ ಕೊಟ್ಟ ಹಣದಲ್ಲಿ ಹೆಂಡತಿಯು ವಿಗಿತಾಯ ಮಾಡಿದರೆ ಆ ವಿಗಿತಾಯ ಮಾಡಿದ ಹಣವು ಯಾರದೆಂದು ಆಕ್ಸ್‌ಫರ್ಡ್ ಕೋರ್ಟಿನಲ್ಲಿ ತೀರ್ಮಾನವಾಗಿ, ಗಂಡನದೇ ಎಂದು ಜಡ್ಜಿಯವರು ತೀರ್ಪುಕೊಟ್ಟರು.

ಕ್ರಿಶ್ಚಿಯನರಾದರೆ ಔಷಧಿ ಕೊಡುತ್ತೇವೆ!

ಗುಜರಾತಿನ ಡಾ|| ಕೃಷ್ಣರಾವ್ ಶ್ರೀಧರ ರಾಮಾರವರು 1911 ರಲ್ಲಿ ಔಷಧಿಗಾಗಿ ಅಲ್ಲಿನ ಮಿಷನ್ ಆಸ್ಪತ್ರೆಗಾಗಿ ಹೋಗಿದ್ದಾಗ ಅವರು ದೀಕ್ಷಾಸ್ನಾನ ಮಾಡಿ ತಮ್ಮ ಮತಕ್ಕೆ ಸೇರಿದರೆ ಮಾತ್ರ ಔಷಧ ಕೊಡುತ್ತೇವೆಂದು ಹೇಳಿದ್ದರಿಂದ ಇವರು ಓದಿ ಡಾಕ್ಟರ್ ಕೆಲಸಮಾಡಲು 1911 ರಲ್ಲಿ ಪ್ರತಿಜ್ಞೆಮಾಡಿ ಈಗ ಡಾಕ್ಟರಾಗಿರುವರು. ಇದೇ ತರಹ ಹಿರಿಯ ವೈಸೂರಿನಲ್ಲಿ ನಡೆಯಿತು.

ಬಟ್ಟೆಗಳ ಖರೀದಿ ಯಾತಕ್ಕೆ ಹೆಚ್ಚಿದೆ

ಒಂದು ಕಾನ್‌ಪೂರ್ ಬಟ್ಟೆಗಿರಣಿಯ ಪಟ್ಟಿ—1939 ರಲ್ಲಿ ಲಾಭ 1263000 ರೂಪಾಯಿ 1941 ರಲ್ಲಿ 1991000 ರೂಪಾಯಿ, 1943 ರಲ್ಲಿ 3405000 ರೂಪಾಯಿ. ಇನ್ನೊಂದು ಮುಂಬಯಿ ಗಿರಣಿಯಪಟ್ಟಿ 1941 ರಲ್ಲಿ ಹತ್ತಿ ಉಪಯೋಗಿಸಿದ್ದು 7022963 ರೂಪಾಯಿ, 1942 ರಲ್ಲಿ 8397602 ರೂ. ನಷ್ಟ, ಒಟ್ಟು ನಫೆ 1941 1660884 ರೂ. 1942 ರಲ್ಲಿ 4800000 ರೂಪಾಯಿ ಈ ಪಟ್ಟಿ ನೋಡಿದರೆ ಹತ್ತಿಯ ಧಾರಣೆ ಏರದಿದ್ದರೂ ಒಂದು ವರ್ಷದಲ್ಲಿ ನಫೆಯು ದ್ವಿಗುಣವಾಗಿದೆ. ಕಾನ್‌ಪೂರ್ ವಿಲ್ಲಿನವರು ಸರ್ಕಾರಕ್ಕೆ 1 ಕೋಟಿ 60 ಲಕ್ಷ ರೂಪಾಯಿ ಹೆಚ್ಚಿನ ತೆರಿಗೆ ಕೊಟ್ಟಿರುತ್ತಾರೆ. ಈ ಹೆಚ್ಚಿಗೆ ತೆರಿಗೆ ಕೊಡಲು ಶೇಕಡ 700 ರಷ್ಟು ಹೆಚ್ಚು ನಫೆ ಸಂಪಾದಿಸಿರುತ್ತಾರೆ. ಇದಕ್ಕಾಗಿಯೇ ಒಟ್ಟಿಗಳ ಧಾರಣೆ ಏರಿದ್ದು, ಇನ್ಯಾವ ಕಾರಣಕ್ಕೂ ಅಲ್ಲ

ಬರಿನ್ನಲಿ ದಂಗೆ

ಟುನಿಷಿಯಾದಲ್ಲಿ ಜರ್ಮನ್‌ರಿಗೆ ಆದ ಅಪಜಯ ಕೇಳಿ ತಮ್ಮ ಮೇಲೆ ಎಂಥ ಗತಿ ಏನಾಯಿತೋ ಎಂದು ಬರ್ಲಿನ್ ನಗರದ ಹೆಂಗಸರು ದೊಡ್ಡ ಗಲಭೆ ಮಾಡಿದರು. ಸೇನೆ ಪರಿಸೆ ಜನರನ್ನು ಓಡಿಸಬೇಕಾಯಿತು.

ವೈಸರಾಯರ ಭಾಷಣ

ಟುನಿಷಿಯ ಗೆದ್ದದ್ದಕ್ಕಾಗಿ ಮೊನ್ನೆ ದೆಹಲಿಯಲ್ಲಿ ಆಕಾಶವಾಣಿಯಲ್ಲಿ ಮಾತನಾಡಿದರು. ನಾಲ್ಕು ವರ್ಷದಿಂದ ಮೈರಕ್ಕ ಕೆಡವಿ ಕಾದಾಡಿದ್ದು ಈ ದಿವಸ ಸಾರ್ಥಕವಾಯಿತು. ಇದರಿಂದ ಮೆಡಿಟರೇನಿಯನ್ ಸಮುದ್ರದಲ್ಲಿ ನಮ್ಮ ನೌಕೆಗಳು ಸಂತಾಗವಾಗಿ ಓಡಾಡಿ ಭಾರತಕ್ಕೆ ಇಂಗ್ಲೆಂಡಿನಿಂದ ಹೆಚ್ಚು ಸಾಮಾನುಗಳು ಬರಲು ಅವಕಾಶವಾಯಿತು. ನಮಗೆ ಪಶ್ಚಿಮದಲ್ಲಿ ಭಯ ನಾಶವಾಯಿತು. ನಾವು ಇನ್ನು ಜಪಾನರ ಹಾವಳಿಯನ್ನು ಎದುರಿಸಬೇಕೆಂದರು.

ರಷ್ಯನರು ವಾರ್ಸಾ ಮೇಲೆ ಧಾಳಿ ಮಾಡಿದರು,

ಅಲೂಷಿಯನ್ ದ್ವೀಪದಲ್ಲಿ ಅತ್ಯಂತ ಪಶ್ಚಿಮದಲ್ಲಿರುವ ಆಟ್ಟು ದ್ವೀಪದಲ್ಲಿ ಹೆಚ್ಚು ಅಮೆರಿಕ ಸೈನ್ಯ ಒಂದಿಳಿದಿವೆಯೆಂದೂ ಅವುಗಳ ಸಂಗಡ ತಾವು ಭೀಕರವಾಗಿ ಕಾದಾಡುತ್ತಿರುವೆನೆಂದೂ ಜಪಾನೀಯರ ಹೇಳಿಕೆ.

ಜಪಾನೀಯರು 13 ರಲ್ಲಿ ಯಾಂಗ್‌ಟೇಸ್ ನದಿಯನ್ನು ದಾಟಿದರು. ಟುಂಗ್‌ಟಿಕ್ ಸರೋವರದ ಹತ್ತಿರ ಕದನ ನಡೆಯುತ್ತಿದೆ. ಜಪಾನೀಯರು ಪೂರ್ವಾನಲ್ಲಿರುವ ಭಾರಿ ಹತ್ತಿಬೆಳೆಯುವ ಪ್ರದೇಶವನ್ನು ತೆಗೆದುಕೊಳ್ಳುವ ಸಾಹಸ ಮಾಡುತ್ತಿರುವರು.

ಭಂಗಾರ ಬೆಳ್ಳಿ ಧಾರಣೆ

ಸವರ್ಣ	ರೂ.	65—12—0
ಬಂಗಾರ ತೊಲ	ರೂ.	94—8—0
ಬೆಳ್ಳಿ ,,		1—7—0

ಇಂಡಿಯಾ ಒಂದು ಜನಾಂಗವೇ?

ನಾವು ಅಂದರೆ ಹಿಂದೂಸ್ಥಾನದವರು ಸ್ವೆದಾಜ್ಯ ಪಡೆಯಲು ಯೋಗ್ಯರಿಲ್ಲ. ಯಾಕೆಂದರೆ ಇವರು ಒಂದು ಜನಾಂಗದವರಲ್ಲವೆಂದು ಅಡಿಗೆ ಪ್ರತಿ ಸಿತ್ಯ ಕೇಳುವರಿ ಮಿ|| ಜಿನ್ನಾರವರು ತಮ್ಮ ಜನಾಂಗಕ್ಕೆ ಅನುಕೂಲ ಪಡಿಸಲು ಇಂಡಿಯಾ ಫೆಡರೇಷನ್ ಕುರ್ಚಾಡು ಮಾಡಲು ಕೇಕಾಡನುದಾಕೆ ಪ ಕ ಕೊಡುವನರಿಲ್ಲದೆ ಹೋಗಲು ಈಗ ಮುಸಲ್ಮಾನರು ಒಂದು ಜನಾಂಗದವರೆನ್ನುವರು. ಇದರಿಂದ ಹಿಂದೂಸ್ಥಾನದಲ್ಲಿ ಹಿಂದೂ ಮುಸ್ಲಿಂ ಎಂಬ ಎಡರು ಜನಾಂಗವಿದ್ದಂತಾಯಿತು.

ಮೊದಲು ಮಿ|| ಜನ್ನಾರವರು ಹೇಳುವ ಪ್ರಶ್ನೆ ಮುನ್ನು ತೆಗೆದ ಕೂಳ್ಯೋಣ ಹಿಂದು ಜನಾಂಗಕ್ಕೆ ಒಂದು ಜಾತಿ ಹಿಂದು ಮತ ಇರಬೇಕಾದುದು ಸಹಜ. ಇನ್ನು ಕೆಲವರು ಆಹಾರ, ಉಡಿಗೆ ಎಲ್ಲ ಒಂದೇ ರೀತಿಯಾಗಿರಬೇಕೆನ್ನುವರು. ಜಾತಿ ವಿನಃ ಬಾಕಿ ವಿಷಯಗಳಲ್ಲಿ ಇಬ್ಬರೂ ಒಂದೇ ರೀತಿಯಲ್ಲಿರುತ್ತಾರೆ. ಭಾಷೆ, ಆಹಾರ ವಸ್ತ್ರ ಉಡಿಗೆ ಎಲ್ಲಾ ಒಂದೇ ತರಹವಲ್ಲವೇ ? ನೋಡಲು ಬಂಗಾಳಿಯವರ ವಿಷಯ ಯೋಚಿಸೋಣ, ಇಲ್ಲಿ ಹಿಂದೂಗಳ ಮತ್ತು ಮುಸಲ್ಮಾನರ ಭಾಷೆ ಒಂದೇ, ಊಟ ಒಂದೇ ತರಹ (ಅಕ್ಕಿ ವಿಷಯ) ಉಡಿಗೆ ತೊಡುವುದನ್ನು ನೋಡಿದರೆ ಇಬ್ಬರೂ ಪಂಚೆ ಕುರ್ತ ಉಡುತ್ತಾರೆ. ಪಂಜಾಬ್‌ದಲ್ಲಿ ಪಂಜಾಬಿ ವಾಯವ್ಯ ಮೂಲೆಯಲ್ಲಿರುವ ಹಿಂದೂ ಮುಸಲ್ಮಾನರು ಒಂದೇ. ಭಾಷೆಯಾಡುತ್ತಾರೆ. ಒಟ್ಟಿ ಒಂದೇ ತರಹ ಸಾಲ್ವಾರ್, ಪಟ್ಕಾ, ಸಾಫ ಉಡುತ್ತಾರೆ. ಊಟ—ಇಬ್ಬರೂ ಗೋಧಿ, ದ್ವಿದಳ ಧಾನ್ಯ ಮತ್ತು ಮಾಂಸ ಉಪಯೋಗಿಸುವರು. ಹಿಂದೂಸ್ಥಾನದ ಉದ್ಯಂತದಲ್ಲಿ ರವ ತಮಿಳು ನಾಡಿಗೆ ಹೋಗಿ ನೋಡಿ. ಅಲ್ಲಿಯೂ ಇವರಿಬ್ಬರ ಭಾಷೆ, ಆಹಾರ, ಉಡಿಗೆ ಎಲ್ಲಾ ಒಂದೇ ತರಹ. ಆದರೆ ಜಾತಿ ಬೇರೆ. ಹೀಗೆ ಜಾತಿ ಬೇರೆಯೆಂದು, ಜನಾಂಗ ಬೇರೆಯೆಂದು ಹೇಳುವುದಕ್ಕಾಗುತ್ತದೆಯೇ ? ಇದನ್ನು ಯಾವ ಚರಿತ್ರೆಕಾರರು ಒಪ್ಪುತ್ತಾರೆ ? ಎಂದಿಗೂ ಇಲ್ಲ. ಈ ತರಹ ಜನಾಂಗವನ್ನು ವಿಭಾಗಮಾಡುವುದು ಪೂರ್ವದಲ್ಲಿರಲಿಲ್ಲ. ಈ ಚೆಗೆ ಮೂಡನೆಯವರು ಗೂಡಿನಿಂದ ಎಂದು ಧಾರಾಳವಾಗಿ ಹೇಳಬಹುದು.

ಹಿಂದೂಸ್ಥಾನದ ವಿಷಯ ಸ್ವಲ್ಪ ಮರೆತುಬಿಟ್ಟು ಇತರ ದೇಶಗಳಲ್ಲಿ ಹ್ಯಾಗಿದೆ ಎಂದು ನೋಡೋಣ. ಆಗ ನಮಗೆ ಈ ವಿಷಯ ಮನದಟ್ಟಾಗುವುದು. ಆಫ್ಘಾನಿಸ್ಥಾನ, ರಷ್ಯ, ಚೈನಾ, ಜಪಾನ್ ಕಡೆ ಹೋಗಿ ನೋಡೋಣ. ಆಫ್ಘಾನಿಸ್ಥಾನದಲ್ಲಿ ಹಿಂದೂಗಳೂ ಮುಸಲ್ಮಾನರೂ ಒಂದೇ ಜನಾಂಗವಾಗಿ ವಾಸಿಸುವರು. ರಷ್ಯಾದಲ್ಲೂ ಚೈನಾದಲ್ಲೂ ಮುಸಲ್ಮಾನರು ಹೇರಳವಾಗಿರುವರು ರಷ್ಯಾದಲ್ಲಿ ಮುಸಲ್ಮಾನರು ಯಾವ ತೊಂದರೆಯಿಲ್ಲದೆ ಸುಖವಾಗಿರುವರು. ಇವರಿಗೆ ಅಲ್ಲಿರುವ ಕ್ರಿಶ್ಚಿಯನರಿಂದಲೂ ವಿಧಿಸ್ಥರಿಂದಲೂ ತೊಂದರೆಯಿದೆಯೇ ? ಚೈನಾದಲ್ಲಿ ಮುಸಲ್ಮಾನರು ಹೆಚ್ಚು ಜನರಿರುವರು ಈಗ ನಡೆಯುತ್ತಿರುವ ಯುದ್ಧದಲ್ಲಿ ಚೀನೀಯರೂ ಮುಸಲ್ಮಾನರೂ ತಮ್ಮ ದೇಶವನ್ನು ಕಾಪಾಡಲು ಒಟ್ಟಿಗೆ ಯುದ್ಧ ಮಾಡುತ್ತಿರುವರು. ಜಪಾನಿನಲ್ಲಿ ಕ್ರಿಶ್ಚಿಯನರ ಸಂಖ್ಯೆ ಹೆಚ್ಚು. ಇವರಿಬ್ಬರೂ ಒಟ್ಟುಗೂಡಿ ಯುದ್ಧ ಮಾಡುತ್ತಿರುವರು ಪರು ಮಂತ್ರಿ ಮಂಡಲದಲ್ಲಿ ಜಪಾನಿ ಕ್ರಿಶ್ಚಿಯನರು ಬಹು ಮಂದಿ ಇರುವರು.

ಅಲ್ಲಿ ಸರ್ಕಾರಿ ಕೆಲಸದಲ್ಲಿ ದೊಡ್ಡ ಉದ್ಯೋಗಲ್ಲಿಯೂ ಇರುವರು. ಅಲ್ಲಿ ಜಪಾನ್ ಕ್ರಿಶ್ಚಿಯನ್ನರೆಂದು ಕೆಲಸಕೊಡುವುವಿಲ್ಲ. ಜಪಾನೀಯರಿಂದೇ ಕೆಲಸ ಕೊಡುವುದು. ದೇಶಕ್ಕೆ ಜಪಾನೀಯರೆಂದೇ ದುಡಿಯುವುದು. ಅಲ್ಲಿಯೂ ಮುಸಲ್ಮಾನರಿಂದರು. ಇವರಿಗೂ ಯಾವ ಭೇಧವೂ ಇಲ್ಲ.

ಹಿಂದೂಸ್ಥಾನದಲ್ಲಿ ಎದುರು ಗಾಳಿ ಏತಕ್ಕೆ ? ಇದು ಕನ್ನಡಿಯ ಹಾಗೆ ನಿಪ್ಪಗೂ ನಮಗೂ ತಿಳಿದ ವಿಷಯ. ಇಲ್ಲಿ ಮೂರನೆಯವರು ಮಧ್ಯೆ ಪ್ರವೇಶ ಮಾಡುವುದೇ ಕಾರಣವಲ್ಲವೆ ? ಆಫ್ಘಾನಿಸ್ಥಾನ, ರಷ್ಯ, ಚೈನಾ, ಜಪಾನ್, ಈ ರಾಜ್ಯಗಲ್ಲಿ ಈ ಮೂರನೇ ದಳದವರ ಸುಳುವೇ ಇಲ್ಲ.

ಇದರಿಂದ ಹಿಂದೂಸ್ಥಾನದ ಮುಸಲ್ಮಾನರು ತಾವು ಬೇರೆ ಜನಾಂಗವೆಂದು ಹೇಳಿಕೊಳ್ಳುವುದು ಸರಿಯೇ ? ಮಿ || ಜಿನ್ನಾರವರಿಗೆ ಹಿಂದೂಸ್ಥಾನವನ್ನು ವಿಭಾಗಮಾಡಿ ಎರಡು ಜನಾಂಗವನ್ನಾಗಿ ಮಾಡಬೇಕೆಂದಿರುವಂತೆ ಕಾಣುತ್ತೆ.

ಈಗ ಎಲ್ಲರ ಬಾಯಲ್ಲಿಯೂ ವಿಶ್ವಾಸ್ಯ ಫೆಡರೇಷನ್, ಯೂರೋಪು ಫೆಡರೇಷನ್ ಪಂಜಾಬು ಫೆಡರೇಷನ್ ಎನ್ನುತ್ತಿರುವಾಗ ಪಾಕಿಸ್ಥಾನ್ ಎಂಬುದನ್ನು ಮಿ || ಜಿನ್ನಾರವರು ಎತ್ತುವುದು ನಗೆಗೆಡಲಾಗಲಾರದೆ. ಪಾಕಿಸ್ಥಾನ ಎಂಬುದು ಎದುರು ಗಾಳಿಗೆ ಸಮಾನವಾದುದು.

(ಸಶೇಷ

ಈ ವಾರದ ಕಥೆ.

ಓದು ಊಟವನ್ನಿಡುವುದೇ ?

(ಕಳೆದ ವಾರದ ಸಂಚಿಕೆಯಿಂದ ಮುಂದುವರಿದುದು)

ಸ್ವರದ್ರೂಪಿ, ವಿದ್ಯಾವಂತ, ಗುಣವಂತ ವತ್ತು ಸ್ವಲ್ಪ ಸ್ಥಿತಿವಂತ ಆದುದರಿಂದ ಸದಾಶಿವನಿಗೆ ಹೆಣ್ಣನ್ನು ಕೊಡಲು ಅನೇಕರು ವೆಂಕಯ್ಯನ ಮನೆಗೆ ಬಂದು ಹೋಗುತ್ತಿದ್ದರು. ವೆಂಕಯ್ಯನಿಗೆ ಇಷ್ಟವಿಲ್ಲ. ಆದರೆ ಪಾರ್ವತಮ್ಮನಿಗೆ ಮದುವೆಮಾಡಬೇಕೆಂಬ ಬಯಕೆ. ಆದುದರಿಂದ ಪಾರ್ವತಮ್ಮನು ತನ್ನ ಹತ್ತಿರ ಬಂಧುಗಳಲ್ಲೊಬ್ಬ ಹುಡುಗಿಯನ್ನು ಸದಾಶಿವನಿಗೆ ತಂದುಕೊಳ್ಳಲು ಒಪ್ಪಿಗೆಕೊಟ್ಟಳು. ಬೇಸಿಗೆಯ ರಜದಲ್ಲಿ ವಿವಾಹವು ಅತಿ ವೈಭವದೊಡನೆ ನಡೆಯಿತು.

ವಿವಾಹದ ನಂತರ ವೆಂಕಯ್ಯನಿಗೆ ಯೋಚನೆ ಹತ್ತಿತು. ಒಂದು ಕಡೆ ವಿದ್ಯೆಗಾಗಿ ಖರ್ಚು, ಅದರೊಂದಿಗೆ ಮದುವೆಯ ಖರ್ಚು, ಈ ಎರಡೂ ಸೇರಿ ಋಣಭಾರವು ಹೆಚ್ಚಿತು. ಮತ್ತೊಂದು ಎಕರೆ ಜಮೀನನ್ನು ಮಾರದೆ ನಿರ್ವಾಹವಿಲ್ಲದಂತಾಯಿತು. ಎರಡು ಎಕರೆ ಜಮೀನಿನಿಂದ ಬರುವ ಆದಾಯವು ಮಗನ ಓದಿಗೂ ಕುಟುಂಬ ಪೋಷಣೆಗೂ ಹೇಗೆ ಸಾಲುವುದೋ ಗ್ರಾಹ್ಯವಾಗಲಿಲ್ಲ. ದಿನಗಟ್ಟಲೆ ಆಲೋಚನಾ ಸಮುದ್ರದಲ್ಲಿ ಮುಳುಗಿತು. ಹಿಂದೆ ಕೆಲವರು ಹೇಳಿದ್ದಂತೆ ಮಗನನ್ನು ಓದಿಗೆ ಹಾಕದಿದ್ದರೆ ಚೆನ್ನಾಗಿತ್ತೆಂದುಕೊಂಡನು. ಹೊಣಕತೆಯು ಒಲವಂತಿಕೆಯಿಂದ ದೂರಾಲೋಚನೆಯಿಲ್ಲದೆ ಮಗನಿಗೆ ಮದುವೆ ಮಾಡಿದ್ದಕ್ಕಾಗಿ ಪಶ್ಚಾತ್ತಾಪಪಟ್ಟನು ವಿವಾಹವನ್ನು ಮಾಡದಿದ್ದಲ್ಲಿ ಆ ಹಣವು ಎರಡು ವರ್ಷದ ಓದಿಗೆ ಸಾಕಾಗುತ್ತಿತ್ತು.

ವಿವಾಹಾನಂತರ ಸದಾಶಿವನಲ್ಲಿಯೂ ಅತನ ವಿದ್ಯಾಭ್ಯಾಸದಲ್ಲಿಯೂ ಹೊಸ ಬದಲಾವಣೆಯು ಕಂಡು ಬಂದಿತು ಆದರೆ ಅತನು ಸಹಜವಾಗಿಯೇ ಬುದ್ಧಿವಂತನಾದುದರಿಂದ ಆ ವರ್ಷವೇ ಸೀನಿಯರ್ ಇಂಟರ್‌ಮೀಡಿಯೇಟ್ ಪರೀಕ್ಷೆಯಲ್ಲಿ ಉತ್ತೀರ್ಣನಾದನು.

ಹಣಾಭಾವ ಹೆಂಡತಿಯು ಸಂಸಾರಕ್ಕೆ ಬಂದಿರುವಿಕೆ, ಈ ಕಾರಣಗಳಿಂದ ಸದಾಶಿವನು ವಿದ್ಯಾಭ್ಯಾಸವನ್ನು ಸಾಕುಮಾಡಬೇಕಾಗಿಬಂದಿತು ಆದರೂ ನವನಾಗರೀಕ ಅಭ್ಯಾಸಗಳಿಗೂ, ಬಾಲದಂಪತಿಗಳ ಉಡುಪುಗಳಿಗೂ ಧನವು ಹೆಚ್ಚಾಗಿ ವ್ಯಯವಾಗಬೇಕಾಗಿಬಂದಿತು, ವಿಧಿಯಿಲ್ಲದೆ ತಂದೆಯ ಸಲಹೆಯನ್ನನುಸರಿಸಿ ಸದಾಶಿವನು ಉದ್ಯೋಗಕ್ಕೆ ಪ್ರಯತ್ನಿಸಲಾರಂಭಿಸಿದನು.

ಆಗಿನ ಕಾಲದಲ್ಲಿ ಉದ್ಯೋಗಗಳಿಗೆ ಈಗಿನಷ್ಟು ಗಿರಾಕಿ ಇರಲಿಲ್ಲ. ಯಾವ ಸಿಫಾರಸಾಗಲಿ, ಲಂಚವಾಗಲಿ ಇಲ್ಲದೆ ತಾಲ್ಲೂಕು ಗುಮಾಸ್ತೆಯ ಕೆಲಸವು ದೊರೆಯಿತು. ಸ್ವಯಂಕೃಷಿಯಿಂದಲೂ ಬುದ್ಧಿಕುಶಲತೆಯಿಂದಲೂ ಅಧಿಕಾರಿಗಳ ಮೆಚ್ಚಿಗೆಯನ್ನು ಪಡೆದು ೫ ವರ್ಷಗಳೊಳಗಾಗಿ ರೆವಿನ್ಯೂ ಇನ್‌ಸ್ಪೆಕ್ಟರಾದನು.

ವೆಂಕಯ್ಯನು ಹಿಂದಿನಂತೆ ವಿಚಾರಮಗ್ನನಾಗದೆ ಮಗನು ತರುವ ಸಂಬಳದಿಂದ ಸುಖಜೀವನವನ್ನು ಮಾಡುತ್ತಾ, ದಾನಧರ್ಮಗಳನ್ನು ಮಾಡುತ್ತಾ, ಕೃಷ್ಣಾ ರಾಮಾ, ಗೋವಿಂದಾ ಎಂದು ದೇವಧ್ಯಾನ ಮಾಡುತ್ತಾ ಕಾಲವನ್ನು ಕಳೆಯಲಾರಂಭಿಸಿದನು, ದೂರಾಲೋಚನೆಯಿಲ್ಲದೆ ಮಾಡಿದ ಮಗನ ವಿವಾಹದ ದ್ರವ್ಯಕ್ಕಾಗಿ ವಿಚಾರಮಾಡುತ್ತಾ, ಆ ಹಣದಿಂದ ಇನ್ನೆರಡು ವರ್ಷಗಳು ಓದಿದ್ದಲ್ಲಿ ಇನ್ನೂ ದೊಡ್ಡ ಕೆಲಸವೂ ಹೆಚ್ಚು ಸಂಬಳವೂ ಮಗನಿಗೆ ಬರುತ್ತಿತ್ತಲ್ಲಾ ಎಂದು ಪಾರ್ವತಮ್ಮನು ಪಶ್ಚಾತ್ತಾಪ ಪಡುತ್ತಿದ್ದಳು.

ಸಾಯುವನೆಂಬ ಭಯದಿಂದ ವಿದ್ಯಾಭ್ಯಾಸಮಾಡಿಸದೆ ತಮ್ಮ ಮಕ್ಕಳನ್ನು ಸೋಮಾರಿಗಳಾಗಿ ಮಾಡಿದ ಹೆಂಗಸರು, ಪಾರ್ವತಮ್ಮನು ಅದೃಷ್ಟಕ್ಕೆ ಅರ್ಘ್ಯ ಗೊಂಡರು. ಊರಿನ ಹಿರಿಯರೆಲ್ಲಾ " ಓದಿದಲ್ಲಿ ಅದರ ಫಲವುಂಟು " ಎಂದೆಂದು ಕೊಳ್ಳಲಾರಂಭಿಸಿದರು.

ಟ್ಯುನಿಸಿಯಾದಲ್ಲಿ ಕಾಳಗ ಮುಗಿಯಿತು ಶತ್ರುಗಳ ದಳಪತಿ ಜನರಲ್ ಫಾನ್ ಅರ್ನಿಂ ಮೊದಲಾದ 1೧ ಮಂದಿ ಕೈಸೆರೆಯಾದರು. ಕೋಟಿಕೋಟಿ ಬೆಲೆಯ ಯುದ್ಧೋದಮ ಸಾಮಗ್ರಿಗಳು ಮಿತ್ರಪಕ್ಷದವರಿಗೆ ಸಿಕ್ಕಿತು. ಇದುವರೆಗೆ ಒಂದಾವರೆ ಲಕ್ಷ ಸೈನಿಕರು ಸೆರೆ ಸಿಕ್ಕಿರುವರು. 6 ತಿಂಗಳಿಂದ ನಡೆಯುತ್ತಿರುವ ಟುನೀಷಿಯಾ ಯುದ್ಧವು ಇಂದಿಗೆ ಮುಗಿಯಿತು. ಶತ್ರುಗಳಿಗೆ ಯುದ್ಧಸಾಮಗ್ರಿಗಳು ಹೇರಳವಾಗಿದ್ದರೂ ಅವರ ಪ್ರಯತ್ನಗಳ ಕೊರತೆಯಾಗಿತ್ತು.